# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

## ಕ.ವಿ.ನಿ.ಆ. (ವಿದ್ಯುತ್ ಸರಬರಾಜಿನ ವೆಚ್ಚದ ವಸೂಲಾತಿ) ವಿನಿಯಮಗಳು, 2004

ಪೀಠಿಕೆ :

ವಿದ್ಯುಚ್ಛಕ್ತಿ ಅಧಿನಿಯಮ, 2003ರ ಪ್ರಕರಣ 46, ವಿನಿಯಮಗಳ ಮೂಲಕ ರಾಜ್ಯದ ಆಯೋಗವನ್ನು ಸಮರ್ಥಗೊಳಿಸಿ, ಅಧಿಕಾರ ನೀಡಿರುವ ಕಾರಣದಿಂದ, ವಿದ್ಯುತ್ ಸರಬರಾಜಿಗೆ ಯಾವುದೇ ವಿದ್ಯುತ್ ಮಾರ್ಗ ಅಥವಾ ಯಂತ್ರ ಬಳಕೆ ಉದ್ದೇಶಕ್ಕಾಗಿ ನೀಡಿದ ಸರಬರಾಜು ಒದಗಿಸಲು ಭರಿಸಿದ ಸಕಾರಣದ ಯಾವುದೇ ವೆಚ್ಚಗಳು, ಪ್ರಕರಣ 43ಕ್ಕೆ ಸಂಬಂಧಿಸಿದಂತೆ ವಿದ್ಯುತ್ ಸರಬರಾಜಿನ ಅಗತ್ಯವಿರುವ ವ್ಯಕ್ತಿಯಿಂದ ಶುಲ್ಕ ವಸೂಲಿಗೆ ವಿತರಣ ಲೈಸೆನ್ಸುದಾರರಿಗೆ ಅಧಿಕಾರವನ್ನು ಕೊಡಲು ಆಯೋಗವು ಅಧಿನಿಯಮದ 181 ನೆಯ ಪ್ರಕರಣದಲ್ಲಿ ಒದಗಿಸಿದಂತೆ ಈ ಮೊದಲಿನ ಅಧಿಕಾರಗಳಿಂದ, ಮುಂದಿನ ವಿನಿಯಮಗಳನ್ನು ರಚಿಸಿದೆ:

### ಅಧ್ಯಾಯ – I

### ಸಾಮಾನ್ಯ:

1) ಸಂಕ್ಷಿಪ್ತ ಹೆಸರು ಪ್ರಾರಂಭ ಮತ್ತು ವ್ಯಾಖ್ಯಾನ :

ಎ) ಈ ವಿನಿಯಮಗಳನ್ನು ಕವಿನಿಆ (ವಿದ್ಯುತ್ ಸರಬರಾಜಿನ ವೆಚ್ಚಗಳ ವಸೂಲಾತಿ) ವಿನಿಯಮಗಳು, 2004 ಎಂದು ಕರೆಯತಕ್ಕದ್ದು.

ಬಿ) ಇವು, ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

ಸಿ) ಈ ವಿನಿಯಮಗಳು, ಕರ್ನಾಟಕ ರಾಜ್ಯದ ತಮಗೆ ಸಂಬಂಧಿಸಿದ ಲೈಸೆನ್ಸು ಪಡೆದ ಪ್ರದೇಶಗಳಲ್ಲಿ ಎಲ್ಲಾ ವಿತರಣ ಲೈಸೆನ್ಸುದಾರರಿಗೆ ಅನ್ವಯಿಸತಕ್ಕದ್ದು.

### ಅಧ್ಯಾಯ – II

2) ವ್ಯಾಖ್ಯಾನಗಳು

ಎ) "ಅಧಿನಿಯಮ" ಎಂದರೆ ವಿದ್ಯುಚ್ಛಕ್ತಿ ಅಧಿನಿಯಮ, 2003 (2003ರ 36).

ಬಿ) "ಅರ್ಜಿದಾರ" ಎಂದರೆ ವಿದ್ಯುತ್ ಸರಬರಾಜಿಗಾಗಿ ವಿತರಣ ಲೈಸೆನ್ಸುದಾರನಲ್ಲಿ ಅರ್ಜಿ ಸಲ್ಲಿಸಿರುವ, ಯಾವುದೇ ಪ್ರದೇಶದ ಮಾಲೀಕ, ಅನುಭೋಗದಾರನಾಗಿರುವ ವ್ಯಕ್ತಿ ಎಂದು ಅರ್ಥ.

ಸಿ) "ಆಯೋಗ" ಎಂದರೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ.

ಡಿ) "ವಿತರಣ ಲೈಸೆನ್ಸುದಾರ" ಎಂದರೆ, ತನ್ನ ಸರಬರಾಜು ಪ್ರದೇಶದಲ್ಲಿ ಗ್ರಾಹಕರಿಗೆ ವಿದ್ಯುತ್ ಸರಬರಾಜು ಮಾಡುವುದಕ್ಕಾಗಿ ವಿತರಣ ಪದ್ಧತಿಯ ನಿರ್ವಹಣೆ ಮತ್ತು ಕಾರ್ಯಚಾಲನೆಗಳ ಪ್ರಾಧಿಕೃತಗೊಂಡ ಲೈಸೆನ್ಸುದಾರ ಎಂದು ಅರ್ಥ.

ಇ) "ವಿತರಣ ಮುಖ್ಯ" ಎಂದರೆ ಸೇವಾಮಾರ್ಗ ಅಥವಾ ಕೂಡಲೇ ಸಂಪರ್ಕಿಸಲು ಉದ್ದೇಶಿಸಿರುವ ಸೇವಾ ಮಾರ್ಗವಿರುವ ಯಾವುದೇ ಮುಖ್ಯದ ಭಾಗ ಎಂದು ಅರ್ಥ.

ಎಫ್) "ವಿತರಣ ಪದ್ಧತಿಯೆಂದರೆ", ವಿದ್ಯುತ್ ಉತ್ಪಾದನಾ ಕೇಂದ್ರದ ಸಂಪರ್ಕ ಅಥವಾ ಪ್ರಸರಣ ಮಾರ್ಗಕ್ಕೆ ವಿತರಣ ಬಿಂದುಗಳ ನಡುವೆ ತಂತಿಗಳ ಪದ್ಧತಿ ಹಾಗೂ ಒಡಗೂಡಿದ ಸೌಲಭ್ಯಗಳು ಹಾಗೂ ಗ್ರಾಹಕರ ಸ್ಥಾವರಕ್ಕೆ ಸಂಪರ್ಕ ಕಲ್ಪಿಸುವ ಸ್ಥಾವರಗಳು ಮತ್ತು ಸಂಬಂಧಿತ ಸೌಲಭ್ಯಗಳು ಎಂದು ಅರ್ಥ.

ಜಿ) "ವಿದ್ಯುತ್ ಮಾರ್ಗ" ಎಂದರೆ, ಯಾವುದೇ ಉದ್ದೇಶದ ವಿದ್ಯುತ್ ಪ್ರಸರಣಕ್ಕಾಗಿ ಬಳಸುವ ಮತ್ತು ಈ ಮುಂದಿನವುಗಳನ್ನು ಒಳಗೊಳ್ಳುವ ಯಾವುದೇ ಮಾರ್ಗ ಎಂದು ಅರ್ಥ.

i) ಯಾವುದೇ ಅಂತಹ ಮಾರ್ಗಕ್ಕಾಗಿ ಯಾವುದೇ ಬೆಂಬಲದ, ಯಾವುದೇ ಸ್ವರೂಪದ, ಟವರ್, ಕಂಬ ಅಥವಾ ಇತರ ವಸ್ತುವಿನಿಂದ, ಅದರ ಮೇಲೆ, ಅದರಿಂದ, ಯಾವುದೇ ಅಂತಹ ಮಾರ್ಗವಿದ್ದರೆ ಅಥವಾ ಬೆಂಬಲಿತ, ಎಳೆದಿರುವ ಅಥವಾ ಇಳಿಬಿಟ್ಟಿದ್ದಾಗಿ ಇರಬಹುದಾದ, ಮತ್ತು

ii) ವಿದ್ಯುತ್ ಪ್ರಸರಣದ ಉದ್ದೇಶಕ್ಕಾಗಿ ಯಾವುದೇ ಅಂತಹ ಮಾರ್ಗಕ್ಕೆ ಸಂಪರ್ಕಿತವಾದ ಯಾವುದೇ ಸಲಕರಣೆಗಳು,

ಎಚ್) "ವಿದ್ಯುತ್ ಘಟಕ" ಎಂದರೆ ಯಾವುದೇ ಯಂತ್ರ, ಉಪಕರಣ, ಸಲಕರಣೆಗಳು ಅಥವಾ ವಾಹಕಗಳು ಅಥವಾ ಅದರಿಂದ ಬಳಕೆಯಾದ ಯಾವುದೇ ಭಾಗ ಅಥವಾ ವಿದ್ಯುತ್ ಉತ್ಪಾದನೆ, ಪ್ರಸರಣ, ವಿತರಣೆ ಅಥವಾ ಸರಬರಾಜಿಗೆ ಸಂಪರ್ಕಿತವಾದುದು; ಆದರೆ ಈ ಮುಂದಿನವು ಒಳಗೊಳ್ಳುವುದಿಲ್ಲ;

i) ವಿದ್ಯುತ್ ಮಾರ್ಗ; ಅಥವಾ

ii) ಯಾವುದೇ ಪ್ರದೇಶಕ್ಕಾಗಿ ಸರಬರಾಜಿನ ವಿದ್ಯುತ್ತಿನ ಪ್ರಮಾಣವನ್ನು ಸ್ಪಷ್ಟಪಡಿಸಿಕೊಳ್ಳುವುದಕ್ಕಾಗಿ ಮಾಪಕದ ಬಳಕೆ; ಅಥವಾ

iii) ಗ್ರಾಹಕನ ನಿಯಂತ್ರಣದಡಿಯಲ್ಲಿರುವಂತಹ ವಿದ್ಯುತ್ ಉಪಕರಣ, ಸಲಕರಣೆ ಅಥವಾ ವಾಹಕಗಳು.

ಐ) "ವಿಶೇಷಾಧಿಕ ವಿದ್ಯುತ್ ಒತ್ತಡ (ಇ.ಎಚ್.ಟಿ)" 33000 ವೋಲ್ಟ್‌ಗಿಂತ ಹೆಚ್ಚಿನ ವೋಲ್ಟೇಜುಗಳಲ್ಲಿ ವಿದ್ಯುತ್ ಸರಬರಾಜು.

ಜೆ) ಅಧಿಕ ವಿದ್ಯುತ್ ಒತ್ತಡ (ಎಚ್.ಟಿ) ಎಂದರೆ 33 ಸಾವಿರ ವೋಲ್ಟ್ಸ್ ಸೇರಿದಂತೆ ಅಲ್ಲಿವರೆಗಿನ ಹಾಗೂ 650 ವೋಲ್ಟ್ಸ್‌ಗಿಂತ ಹೆಚ್ಚಿನ ವೋಲ್ಟೇಜುಗಳಲ್ಲಿ ಸರಬರಾಜು.

ಕೆ) ಕ.ವಿ.ಸು. ಅಧಿನಿಯಮ ಎಂದರೆ ಕರ್ನಾಟಕ ವಿದ್ಯುತ್ ಸುಧಾರಣ ಅಧಿನಿಯಮ, 1999 (1999ರ ಸಂಖ್ಯೆ 25).

ಎಲ್) "ಕೆ.ವಿ." ಎಂದರೆ ಕಿಲೊ ವೋಲ್ಟ್ಸ್.

ಎಂ) "ಅಲ್ಪ ವಿದ್ಯುತ್ ಒತ್ತಡ (ಎಲ್.ಟಿ)" ಎಂದರೆ 650 ಮತ್ತು ಅದಕ್ಕಿಂತ ಕಡಿಮೆ ವೋಲ್ಟೇಜಿನಲ್ಲಿ ಸರಬರಾಜು.

ಎನ್) ಸರಬರಾಜಿನ ಪ್ರಾರಂಭದ ಬಿಂದು ಎಂದರೆ ಎಲ್.ಟಿ. ಸ್ಥಾಪನಗಳ ಪ್ರಕರಣದಲ್ಲಿ ಗ್ರಾಹಕರ ಆವರಣದಲ್ಲಿ ಹೊರಹೋಗುವ ಟರ್ಮಿನಲ್ ಗಳಿಗೆ ಲೈಸೆನ್ಸುದಾರರು ಜೋಡಿಸಿರುವ ಕಟೌಟುಗಳು ಮತ್ತು ಎಚ್.ಟಿ. ಸ್ಥಾಪನಗಳ ಪ್ರಕರಣದಲ್ಲಿ ಗ್ರಾಹಕರ ಉಪಕರಣಗಳಿಗೆ ಹೊರಹೋಗುವ ಟರ್ಮಿನಲ್‌ಗಳಿಗೆ ಲೈಸೆನ್ಸುದಾರರು ಜೋಡಿಸಿರುವ ಮೀಟರಿಂಗ್ ಕ್ಯೂಬಿಕಲ್.

ಒ) ಆವರಣವು ಯಾವುದೇ ಭೂಮಿ, ಕಟ್ಟಡ ಅಥವಾ ಕಟ್ಟಡ ಸ್ವರೂಪಗಳನ್ನು ಒಳಗೊಳ್ಳುತ್ತದೆ.

ಪಿ) ದರಗಳ ಅನುಸೂಚಿ ಎಂದರೆ ವಿತರಣ ಲೈಸೆನ್ಸುದಾರನಿಂದ ನಿಯತವಾಗಿ ಪ್ರಕಟಣೆಯಾಗುವ ಸಿದ್ಧಪಡಿಸಿದ ದರಗಳ ಅನುಸೂಚಿ.

ಕ್ಯೂ) "ಸೇವಾ ಮಾರ್ಗ" ಎಂದರೆ,

i) ವಿತರಣ ಲೈಸೆನ್ಸುದಾರನ ಪ್ರದೇಶದಿಂದ ನೂಡಲೇ ಅಥವಾ ವಿತರಣ ಮುಖ್ಯದಿಂದ ಓರ್ವ ಗ್ರಾಹಕನಿಗೆ; ಅಥವಾ

ii) ವಿತರಣ ಮುಖ್ಯದಿಂದ ಅದೇ ಪ್ರದೇಶದಲ್ಲಿ ಗ್ರಾಹಕರ ತಂಡಕ್ಕೆ ಅಥವಾ ಅದೇ ವಿತರಣ ಮುಖ್ಯ ಅದೇ ಬಿಂದುವಿನಿಂದ ಪಕ್ಕದ ಪ್ರದೇಶಕ್ಕೆ ಸರಬರಾಜು ಮಾಡಲು ಉದ್ದೇಶಿಸುವ ಅಥವಾ ಯಾವುದೇ ವಿದ್ಯುತ್ ಸರಬರಾಜು ಮಾರ್ಗದ ಮೂಲಕ ಸರಬರಾಜು ಮಾಡಿರುವುದು ಎಂಬರ್ಥ.

ಈ ವಿನಿಯಮಗಳಲ್ಲಿ ಪರಿಭಾಷಿಸದಿರುವ ಪದ ಮತ್ತು ಪದಾವಳಿಗಳುಗಳು, ವಿದ್ಯುಚ್ಛಕ್ತಿ ಅಧಿನಿಯಮ, 2003 ಮತ್ತು ಕ.ವಿ.ಸು ಅಧಿನಿಯಮ, 1999 ರಲ್ಲಿ ಇರುವ ಅದೇ ಅರ್ಥವನ್ನು ಹೊಂದಿರತಕ್ಕದ್ದು. ಕ.ವಿ.ಸು ಅಧಿನಿಯಮ ಮತ್ತು ಅಧಿನಿಯಮಗಳ ನಡುವೆ ಅಸಂಗತಿ ಉಂಟಾದ ಪ್ರಕರಣದಲ್ಲಿ, ಅಧಿನಿಯಮದಲ್ಲಿ ನೀಡಲಾದ ಅರ್ಥಗಳೇ ಇರತಕ್ಕದ್ದು.

# ಅಧ್ಯಾಯ - III

3.1. ಬಡಾವಣೆಗಳನ್ನು ಹೊರತುಪಡಿಸಿ, ಕಡಿಮೆ ವಿದ್ಯುತ್ ಪ್ರಮಾಣ (ಎಲ್.ಟಿ.) ಉಪಬಂಧಗಳು :

3.1.1 ಎಲ್.ಟಿ. ಪ್ರವರ್ಗದಡಿಯಲ್ಲಿ, ಅರ್ಜಿದಾರನಿಗೆ ಸಂಪರ್ಕ ಬಿಂದುವರೆಗೆ ವಿದ್ಯುತ್ ಸರಬರಾಜನ್ನು ಒದಗಿಸುವುದಕ್ಕಾಗಿ ವಿತರಣಾ ಲೈಸೆನ್ಸುದಾರರು ವಿತರಣಾ ಮಾರ್ಗ/ಘಟಕಗಳಿಗಾಗಿ ವೆಚ್ಚವಾಗಿರುವ ಮೊತ್ತವನ್ನು ಈ ಮುಂದಿನಂತೆ ಅರ್ಜಿದಾರನಿಂದ ಸಂಗ್ರಹಿಸತಕ್ಕದ್ದು.

(ಟಿಪ್ಪಣಿ : 3.1.1 ಕಂಡಿಕೆಯ ಉದ್ದೇಶಕ್ಕಾಗಿ ಸಂಪರ್ಕ ಬಿಂದು ಎಂದರೆ ಎಲ್.ಟಿ/ಎಚ್.ಟಿ ಮಾರ್ಗ ಸಾಗುವ ಟರ್ಮಿನಲ್ ಹಾಗೂ ಅರ್ಜಿದಾರನ ಆವರಣದ ಹೊರಗಡೆಯಿಂದ 30 ಮೀಟರ್‌ಗಳ ಒಳಗೆ ಇರುವುದು ಎಂದರ್ಥ.)

ಎ) ಗೃಹ ಮತ್ತು ವಾಣಿಜ್ಯಾತ್ಮಕ ಸ್ಥಾಪನಗಳ ಸಂಬಂಧದಲ್ಲಿ 25 ಕಿ. ವಾ ಗಿಂತ ಕಡಿಮೆ ಇರುವ ಲೋಡಿಗಾಗಿ :

| ಕ್ರಮ ಸಂಖ್ಯೆ | ಕೋರಿದ ಲೋಡು | ಸಂಗ್ರಹಿಸಬೇಕಾದ ಮೊತ್ತ |
|---|---|---|
| I | 3 ಕಿ. ವಾ. ಸೇರಿದಂತೆ ಅಲ್ಲಿಯವರೆಗೆ | ಇಲ್ಲ |
| II | 15 ಕಿ.ವಾ. ಸೇರಿದಂತೆ ಅಲ್ಲಿಯವರೆಗೆಮತ್ತು 3 ಕಿ.ವಾ. ಗಿಂತ ಹೆಚ್ಚು | 3 ಕಿ.ವಾ. ಗಿಂತ ಹೆಚ್ಚಿನ ಲೋಡಿಗಾಗಿ ಪ್ರತಿ ಕಿ.ವಾ.ಗೆ 650/- ರೂ. |
| III | 15 ಕಿ.ವಾ. ಗಿಂತ ಜಾಸ್ತಿ ಮತ್ತು 25 ಕಿ.ವಾ.ಗಿಂತ ಕಡಿಮೆ | 15 ಕಿ.ವಾ. ಗಿಂತ ಮೇಲಿನ ಲೋಡಿಗಾಗಿ ಪ್ರತಿ ಕಿ.ವಾ.ಗೆ 1300.00 ರೂ. ಪ್ಲಸ್ ರೂ. 7800.00 |

ಟಿಪ್ಪಣಿ : ಎ) ಗೃಹ ಅಥವಾ ವಾಣಿಜ್ಯಾತ್ಮಕ ಲೋಡಿನ ಪ್ರಕರಣದಲ್ಲಿ ಕೋರಿಕೆಯ ಗರಿಷ್ಟ ಮಿತಿ 100 ಕಿ.ವಾ. ಗಿಂತ ಕಡಿಮೆಯಿರತಕ್ಕದ್ದು. ಕೋರಿಕೆಯ ಲೋಡು 25 ಕಿ.ವಾಟ್ ಮತ್ತು ಅದಕ್ಕಿಂತ ಹೆಚ್ಚಿದ್ದ ಪ್ರಕರಣದಲ್ಲಿ ಈ ವಿನಿಯಮಗಳ ಉಪಕಂಡಿಕೆ 3.1.5 ಅನ್ನು ಅನ್ವಯಿಸತಕ್ಕದ್ದು.

ಬಿ) ಕೈಗಾರಿಕಾ ಸ್ಥಾಪನಗಳ ಸಂಬಂಧದಲ್ಲಿ 50 ಕಿ. ವಾ. ಗಿಂತ ಕಡಿಮೆ ಇರುವ ಲೋಡಿಗಾಗಿ:

| ಕ್ರಮ ಸಂಖ್ಯೆ | ಕೋರಿದ ಲೋಡು | ಸಂಗ್ರಹಿಸಬೇಕಾದ ಮೊತ್ತ |
|---|---|---|
| I | 3 ಕಿ.ವಾ. ಸೇರಿದಂತೆ ಅಲ್ಲಿಯವರೆಗೆ | ಇಲ್ಲ |
| II | 15 ಕಿ.ವಾ. ಸೇರಿದಂತೆ ಅಲ್ಲಿಯವರೆಗೆ ಮತ್ತು 3 ಕಿ.ವಾ. ಗಿಂತ ಹೆಚ್ಚು | 3 ಕಿ.ವಾ. ಗಿಂತ ಹೆಚ್ಚಿನ ಲೋಡಿಗಾಗಿ ಪ್ರತಿ ಕಿ.ವಾ. ಗೆ 650/- ರೂ. |
| III | 15 ಕಿ.ವಾ. ಗಿಂತ ಜಾಸ್ತಿ ಮತ್ತು 25 ಕಿ.ವಾ. ಗಿಂತ ಕಡಿಮೆ | 15 ಕಿ.ವಾ. ಗಿಂತ ಮೇಲಿನ ಲೋಡಿಗಾಗಿ ರೂ. 7800.00 ಪ್ಲಸ್ ಪ್ರತಿ ಕಿ.ವಾ.ಗೆ 1300.00 ರೂ. |
| IIII | 25 ಕಿ.ವಾ. ಗಿಂತ ಜಾಸ್ತಿ ಆದರೆ 50 ಕಿ.ವಾ. ಗಿಂತ ಕಡಿಮೆ | 25. ಕಿ.ವಾ. ಗಿಂತ ಮೇಲಿನ ಲೋಡಿಗಾಗಿ ರೂ. 20800/- ಪ್ಲಸ್ ಪ್ರತಿ ಕಿ.ವಾ.ಗೆ 1950.00 ರು. |

ಟಿಪ್ಪಣಿ : (ಈ ಮೇಲಿನ ಕೋಷ್ಟಕ ಎ ಮತ್ತು ಬಿ ಅನ್ವಯ)

ಎ) ಕಿ.ವಾ. ನ ಅಪೂರ್ಣಾಂಕವನ್ನು ಮುಂದಿನ ಕಿ.ವಾ. ಗೆ ಪೂರ್ಣಾಂಕಗೊಳಿಸತಕ್ಕುದು.

ಬಿ) ಕೈಗಾರಿಕಾ ಲೋಡಿನ ಪ್ರಕರಣದಲ್ಲಿ ಗರಿಷ್ಟ ಕೋರಿಕೆಯ ಲೋಡು 50 ಕಿ.ವಾ. ಗಿಂತ ಕಡಿಮೆಯಿರಬೇಕು.

ಸಿ) 3 ಕಿ.ವಾ. ಗಿಂತ ಹೆಚ್ಚಿನ ಲೋಡಿಗಾಗಿ ಈ ಮೇಲಿನ ಶುಲ್ಕಗಳ ಜೊತೆಗೆ ಪ್ರತಿ ಕಿ.ವಾ.ಗೆ ರೂ. 1000.00 ಯನ್ನು ಹೆಚ್ಚುವರಿಯಾಗಿ ಬೆಂಗಳೂರಿನಲ್ಲಿ (ಬೆಂ. ಅ. ಪ್ರಾ. ಮತ್ತು ಬೆಂ.ನ.ಪಾ. ಪ್ರದೇಶಗಳಲ್ಲಿ) ಎಲ್.ಟಿ/ಎಚ್.ಟಿ ಭೂಗತ ಕೇಬಲ್ಲುಗಳ ಬಳಕೆಗಾಗಿ ಸಂಗ್ರಹಿಸತಕ್ಕದ್ದು.

ಡಿ) ಈ ವಿನಿಯಮಗಳ ಪ್ರತ್ಯೇಕವಾದ ಉಪಬಂಧಗಳಂತೆ ಒಳಗೊಳ್ಳುವ ಬೀದಿ ದೀಪಗಳು, ಎಲ್.ಟಿ. ನೀರು ಸರಬರಾಜು ಮತ್ತು ನೀರಾವರಿ ಪಂಪುಸೆಟ್ಟುಗಳಿಗೆ ಈ ಮೇಲಿನ ಶುಲ್ಕಗಳನ್ನು ಅನ್ವಯಿಸತಕ್ಕದ್ದಲ್ಲ.

ಇ) ಹಾಲಿ ಸ್ಥಾಪನಗಳಿಗೆ ಹೆಚ್ಚುವರಿ ಲೋಡಿಗಾಗಿ ಕೋರಿಕೆಯಲ್ಲಿ ವಿದ್ಯುತ್ ಮಾರ್ಗ/ಘಟಕಕ್ಕಾಗಿ (ಹಾಲಿ + ಹೆಚ್ಚುವರಿ ಲೋಡು) ಒಟ್ಟು ಲೋಡಿನ ವೆಚ್ಚವನ್ನು ಈ ಮೇಲಿನ ಕೋಷ್ಟಕದ ಸೂಕ್ತವಾದ ಸ್ಲ್ಯಾಬ್ ದರದಂತೆ ಲೆಕ್ಕಮಾಡಬಹುದಾಗಿದೆ ಹಾಗೂ ವಿದ್ಯುತ್ ಮಾರ್ಗ/ಘಟಕ/ಸೇವಾ ಮಾರ್ಗಗಳ ಯಾವುದೇ ವೆಚ್ಚವನ್ನು ಈ ಹಿಂದೆ ತುಂಬಿದ್ದರೆ ಅದನ್ನು ಕಳೆಯಲು ಅವಕಾಶ ನೀಡಬಹುದಾಗಿದೆ. ಹಾಲಿಯಿರುವ ಸ್ಥಾಪನಗಳಿಂದ ಹೆಚ್ಚುವರಿ ಕೋರಿದ್ದ ಪ್ರಕರಣದಲ್ಲಿ, ಅನ್ವಯವಾಗುವ ಪ್ರತಿ ಕಿ.ವಾ.ಗೆ ರೂ. 1000.00 ಹೆಚ್ಚುವರಿ ಮೊತ್ತವನ್ನು ಬೆಂಗಳೂರಿನ ನಗರ ಪ್ರದೇಶದಲ್ಲಿ (ಬೆಂ. ಅ. ಪ್ರಾ, ಮತ್ತು ಬೆಂ. ನ. ಪಾ. ಪ್ರದೇಶಗಳಲ್ಲಿ) ಎಲ್.ಟಿ/ಎಚ್.ಟಿ. ಭೂಗತ ಕೇಬಲ್ಲುಗಳ ಬಳಕೆಗಾಗಿನ ವೆಚ್ಚವನ್ನು ಸಂಗ್ರಹಿಸತಕ್ಕದ್ದು.

3.1.2 ವಿತರಣ ಲೈಸೆನ್ಸುದಾರನು, ಮೇಲಿನ ಉಪಕಂಡಿಕೆ 3.1.1 ರಲ್ಲಿ ನಿರ್ದಿಷ್ಟಪಡಿಸಿದ ಮೊತ್ತವನ್ನು ಸಂಗ್ರಹಿಸಿ, ಬೇಕಾಗಬಹುದಾದ ಅಂತಿಮ ಕಂಬವೂ, ಹಾಗೂ ಗ್ರಾಹಕನ ಪ್ರದೇಶದವರೆಗೆ ವಿದ್ಯುತ್ ಮಾರ್ಗ/ಘಟಕವನ್ನು ಒದಗಿಸುವುದೂ ಸೇರಿದಂತೆ ವಿದ್ಯುತ್ ಸರಬರಾಜು ಒದಗಿಸುವುದಕ್ಕಾಗಿ ಎಲ್ಲಾ ಅಗತ್ಯ ಕಾಮಗಾರಿಗಳನ್ನು ಕೈಗೊಳ್ಳತಕ್ಕದ್ದು.

ಅರ್ಜಿದಾರನು ಲೈಸೆನ್ಸುದಾರನ ನಿರ್ದಿಷ್ಟ ಸೂಚನೆಗಳು ಹಾಗೂ ಪ್ರಮಾಣಿತ ನಕ್ಷೆಗಳು ಅಂದಾಜಿನಂತೆ ವಿದ್ಯುತ್ ಮಾರ್ಗ/ಘಟಕದ ವಿಸ್ತರಣೆಯ ಕಾಮಗಾರಿಯನ್ನು ಸ್ವಂತ ವೆಚ್ಚದಲ್ಲಿ ಮಾಡಿಕೊಳ್ಳಬಯಸಿದರೆ ಅದಕ್ಕೆ ಮಂಜೂರು ನೀಡಬೇಕು. ಅಂತಹ ಪ್ರಕರಣಗಳಲ್ಲಿ ಅರ್ಜಿದಾರನು ಸರಬರಾಜಿನ ವಿಸ್ತರಣೆಗಾಗಿನ ಕಾಮಗಾರಿಯ ಅಂದಾಜು ವೆಚ್ಚದ ಶೇಕಡಾ 10 ರಷ್ಟನ್ನು ಲೈಸೆನ್ಸುದಾರರಿಗೆ ಉಸ್ತುವಾರಿ ಶುಲ್ಕವನ್ನು ಸಂದಾಯಮಾಡಬೇಕು. ಕಾಮಗಾರಿಯನ್ನು ಅರ್ಜಿದಾರನು ಸ್ವಂತವಾಗಿ ನಿರ್ವಹಿಸಿರುವ ಕಡೆಯಲ್ಲಿ ಲೈಸೆನ್ಸುದಾರನು ಈ ಮೇಲೆ ನಿರ್ದಿಷ್ಟಪಡಿಸಿರುವ ಉಪಕಂಡಿಕೆ 3.1.1 ರಂತೆ ಶುಲ್ಕಗಳನ್ನು ಸಂಗ್ರಹಿಸತಕ್ಕದ್ದಲ್ಲ.

3.1.3 ಅರ್ಜಿದಾರನು, ಸ್ವಂತ ವೆಚ್ಚದಲ್ಲಿ ಕೊನೆಯ ಕಂಬದಿಂದ ತನ್ನ ಪ್ರದೇಶದ ಮಾಪಕ ಬಿಂದುವಿನವರೆಗೆ ಕಡಿಮೆ ವಿದ್ಯುತ್ ಪ್ರಮಾಣದ (ಎಲ್.ಟಿ) ಸೇವಾ ಮಾರ್ಗವನ್ನು ಮಾನ್ಯತೆ ಪಡೆದ ಒಂದನೆಯ ವರ್ಗದ ವಿದ್ಯುತ್ ಗುತ್ತಿಗೆದಾರರ ಮೂಲಕ ಸ್ಥಾಪಿಸಬೇಕು.

3.1.4 ವಿತರಣ ಲೈಸೆನ್ಸುದಾರನು, ಕ.ವಿ.ನಿ.ಆ. (ಸರಬರಾಜಿನ ಕರ್ತವ್ಯ) ವಿನಿಯಮಗಳು, 2004ರಲ್ಲಿ ನಿರ್ದಿಷ್ಟ ಪಡಿಸಿರುವ ಕಾಲಮಿತಿಯೊಳಗೆ ವಿದ್ಯುತ್ ಸರಬರಾಜನ್ನು ಒದಗಿಸತಕ್ಕದ್ದು.

3.1.5 ಅರ್ಜಿದಾರನು ಕೋರಿದ ಲೋಡು 25 ಕಿ.ವಾ. ನ್ನು ಮೀರಿದ್ದರೆ ಅಥವಾ ಕಟ್ಟಿತ ನಿರ್ಮಾಣ ಪ್ರದೇಶ 500 ಚ. ಮೀಟರಿಗಿಂತ ಹೆಚ್ಚಿದ್ದರೆ, ಅಂತಹ ಅರ್ಜಿದಾರನು ತನ್ನ ಪ್ರದೇಶದಲ್ಲಿ ಮಾಪಕ ವ್ಯವಸ್ಥೆಗೂ ಸೇರಿದಂತೆ ಟ್ರಾನ್ಸ್‌ಫಾರ್ಮರು ಮತ್ತು ಅದಕ್ಕೆ ಸಂಬಂಧಿಸಿದ ಉಪಕರಣಗಳ ಸ್ಥಾಪನೆಗೆ ಬೇಕಾದ ಸ್ಥಳಾವಕಾಶ ಒದಗಿಸತಕ್ಕದ್ದು. ಅರ್ಜಿದಾರನು ಹಾಗೆ ಒದಗಿಸಿದ ಟ್ರಾನ್ಸ್‌ಫಾರ್ಮರನ್ನು ಅಂತಹ ಅರ್ಜಿದಾರನ ಪ್ರದೇಶದಲ್ಲಿ ಸ್ಥಾಪಿಸಬೇಕು. ಅದಕ್ಕಾಗಿ ಅರ್ಜಿದಾರನು ಸ್ಥಳ ಒದಗಿಸಬೇಕಾದ ವಿವರಗಳು ಮುಂದಿನಂತಿರಬೇಕು:--

ಎ) ವಿತರಣ ಟ್ರಾನ್ಸ್‌ಫಾರ್ಮರ್ ಮತ್ತು ಸಂಬಂಧಿಸಿದ ಸ್ವಿಚ್ ಗೇರ್‌ಗಳನ್ನು ಸ್ಥಾಪಿಸುವುದಕ್ಕಾಗಿ ಅರ್ಜಿದಾರನ ಪ್ರದೇಶದ ಮುಖ್ಯದ್ವಾರದ ಸಮೀಪದಲ್ಲಿ ನೆಲ ಮಹಡಿಯಲ್ಲಿ 5 X 4 ಮೀಟರ್ ಅಳತೆಯ ಆರ್‌ಸಿಸಿ ಛಾವಣಿಯ ಮತ್ತು 2.25 ಮೀಟರ ಎತ್ತರದೊಂದಿಗೆ ಬೀಗ ಹಾಕುವ ಸೌಲಭ್ಯವಿರುವ, ಎಕ್ಸಾಸ್ಟ್ ಫ್ಯಾನುಗಳು ಮತ್ತು ಸಾಕಷ್ಟು ಪ್ರಮಾಣದ ಕೇಬಲ್ಲುಗಳನ್ನು ಇರಿಸುವ ವಿದ್ಯುತ್ ಕೊಠಡಿಯನ್ನು ಒದಗಿಸಬೇಕು. ಅಥವಾ

ಬಿ) ವಿತರಣ ಟ್ರಾನ್ಸ್‌ಫಾರ್ಮರ್ ಮತ್ತು ಸಂಬಂಧಿಸಿದ ಸ್ವಿಚ್ ಗೇರ್‌ಗಳನ್ನು ಸ್ಥಾಪಿಸುವುದಕ್ಕಾಗಿ ಅರ್ಜಿದಾರನ ಪ್ರದೇಶದ ಮುಖ್ಯದ್ವಾರದ ಸಮೀಪದಲ್ಲಿ 3 X 5 ಮೀಟರ್ ಅಳತೆಯ ಮುಕ್ತವಾದ ಜಾಗ ಒದಗಿಸಬೇಕು.

ಟಿಪ್ಪಣಿ :

1) ಅರ್ಜಿದಾರನು ಸ್ಥಳಾವಕಾಶ ಒದಗಿಸದಿದ್ದಲ್ಲಿ ಆತನು ವಿದ್ಯುತ್ ಸಂಪರ್ಕ ಪಡೆಯಲು ಅರ್ಹನಾಗುವುದಿಲ್ಲ.

2) ಕಟ್ಟಡ ನಿರ್ಮಿತ ಪ್ರದೇಶದ ಲೆಕ್ಕಾಚಾರಕ್ಕಾಗಿ ಕಾರು ನಿಲ್ದಾಣ, ಹೊರಗಿನ ಸ್ಟೇರ್ ಕೇಸ್ ಪ್ರದೇಶ ಮತ್ತು ಬಾಲ್ಕನಿ ಪ್ರದೇಶದ ಶೇಕಡಾ 50 ರಷ್ಟನ್ನು ತೆಗೆದುಕೊಳ್ಳಲಾಗುವುದು.

3) ನೀರಿನ ಟ್ಯಾಂಕ್ ಮತ್ತು ಚಜ್ಜಾ ಪ್ರದೇಶಗಳನ್ನು ಕಟ್ಟಡ ನಿರ್ಮಿತ ಪ್ರದೇಶದ ಲೆಕ್ಕಾಚಾರಕ್ಕಾಗಿ ತೆಗೆದುಕೊಳ್ಳಕೂಡದು.

4) ಒಂದೇ ಸ್ಥಳದಲ್ಲಿ ಎರಡು ಅಥವಾ ಮೂರು ಕಟ್ಟಡಗಳನ್ನು ಮಂಜೂರಾದ ನಕ್ಷೆಯಲ್ಲಿದ್ದ ಪ್ರಕರಣದಲ್ಲಿ ಎಲ್ಲವನ್ನು ಕಟ್ಟಡ ನಿರ್ಮಿತ ಪ್ರದೇಶವೆಂದು ಲೆಕ್ಕಾಚಾರಮಾಡಬೇಕು.

5) ಶಿಕ್ಷಣ ಸಂಸ್ಥೆಗಳು, ಸರ್ಕಾರಿ ಆಸ್ಪತ್ರೆಗಳು, ಸರ್ಕಾರಿ ಅತಿಥಿ ಗೃಹಗಳು, ದತ್ತಿ ಸಂಸ್ಥೆಗಳ ಆಸ್ಪತ್ರೆಗಳು, ವಿದ್ಯಾರ್ಥಿ ನಿಲಯಗಳು, ಕೊಳಚೆ ಪ್ರದೇಶಗಳ ಬಹುಮಹಡಿಗಳು, ಮತ್ತು ಎಲ್.ಟಿ. ಕೈಗಾರಿಕೆಗಳು ಉಪ ಪ್ರಕರಣ 3.1.5 ಅನ್ವಯವಾಗುವುದಿಲ್ಲ. ಆದರೂ, ಕಂಡಿಕೆ 3.1.1 (ಎ) ಯಲ್ಲಿ ನಿರ್ದಿಷ್ಟಪಡಿಸಿದ ದರಗಳಲ್ಲಿ ವಿದ್ಯುತ್ ಮಾರ್ಗ/ಘಟಕಕ್ಕಾಗುವ ವೆಚ್ಚವನ್ನು ಸಂದಾಯಮಾಡುವುದಕ್ಕೆ ಬಾಧ್ಯರಾಗಿರುತ್ತಾರೆ. ಲೋಡು 25 ಕಿ.ವಾ. ಮತ್ತು ಅದಕ್ಕಿಂತ ಹೆಚ್ಚಿದ್ದ ಪ್ರಕರಣದಲ್ಲಿ ವಿದ್ಯುತ್ ಮಾರ್ಗ/ಘಟಕಕ್ಕಾಗುವ ವೆಚ್ಚ ರೂ. 20,800 ಮತ್ತು 25 ಕಿ.ವಾ. ಗಿಂತ ಹೆಚ್ಚಿನ ಲೋಡಿಗಾಗಿ ಪ್ರತಿ ಕಿ.ವಾ. ಗೆ ರೂ. 1950/– ಸಂದಾಯಮಾಡಬೇಕು.

6) ಕಟ್ಟಡ ನಿರ್ಮಿತ ಪ್ರದೇಶವನ್ನು ಗಣನೆಗೆ ತೆಗೆದಕೊಳ್ಳದೆ 25 ಕಿ.ವಾ. ಮತ್ತು ಅದಕ್ಕಿಂತ ಕಡಿಮೆಯಿರುವ ಕೋರಿಕೆಯ ಲೋಡಿದ್ದಲ್ಲಿ ಕಂಡಿಕೆ 3.1.5 ಯಂತೆ ಈ ಮುಂದಿನ ಸ್ಥಾಪನಗಳು ಪ್ರಕರಣದಲ್ಲಿ ಅನ್ವಯವಾಗುತ್ತದೆ:

ಸರ್ಕಾರಿ ಕಚೇರಿಗಳ ಕಟ್ಟಡಗಳು (ಸರ್ಕಾರಿ ಒಡೆತನ) ಗೋದಾಮುಗಳು, ಕಲಾಮಂದಿರಗಳು, ಆರ್ಟ್ ಗ್ಯಾಲರಿಗಳು, ಸಮುದಾಯಭವನಗಳು, ಫಿಲ್ಮ್ ಸಂಘಗಳ ಥಿಯೇಟರ್‌ಗಳು, ಆಡುಟೋರಿಯಮ್ಮುಗಳು ಮತ್ತು ಆದಾಯ ತೆರಿಗೆ ಅಧಿನಿಯಮದ 12–ಎ ಉಪ ಪ್ರಕರಣದಂತೆ ನೋಂದಣಿಗೊಂಡಿರುವ ದತ್ತಿ/ಧಾರ್ಮಿಕ ಸಂಸ್ಥೆಗಳು, ದೇವಸ್ಥಾನಗಳು, ಮಸೀದಿಗಳು, ಚರ್ಚುಗಳು, ಗುರುದ್ವಾರಗಳು ಮತ್ತಿತರ ಪೂಜಾಸ್ಥಳಗಳು, ಯುವಕೇಂದ್ರಗಳು, ಮತ್ತು ವೃತ್ತಿ ಕೇಂದ್ರಗಳು. ಆದರೂ 25 ಕಿ.ವಾ. ಮತ್ತು ಅದಕ್ಕಿಂತ ಹೆಚ್ಚಿನ ಕೋರಿಕೆ ಲೋಡಿದ್ದಲ್ಲಿ ಕಂಡಿಕೆ 3.1.5 ಅನ್ವಯವಾಗತಕ್ಕದ್ದು.

3.1.6. ಅರ್ಜಿದಾರನ ಪ್ರದೇಶದಲ್ಲಿ ವಿದ್ಯುತ್ ಮಾರ್ಗದ ವಿಸ್ತರಣೆ ಮತ್ತು / ಅಥವಾ ವಿದ್ಯುತ್ ಕಂಬದ ಅಗತ್ಯವಿರುವಲ್ಲಿ ಅರ್ಜಿದಾರನು ಅಂತಹ ಕಾಮಗಾರಿಗಳನ್ನು ಸೂಕ್ತ ವರ್ಗದ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರನ ಮೂಲಕ ಸ್ವಂತ ವೆಚ್ಚದಲ್ಲಿ ಮಾಡಿಕೊಳ್ಳತಕ್ಕದ್ದು.

3.1.7 ಹಾಲಿ ಗ್ರಾಹಕರು ಹೆಚ್ಚುವರಿ ಲೋಡಿನ ಕೋರುತ್ತಿರುವುದರಿಂದ ಅಂತಹ ಲೋಡಿನಿಂದ ಒಟ್ಟು 25 ಕಿ.ವಾ. ಅಥವಾ ಅದಕ್ಕಿಂತ ಹೆಚ್ಚಿನ ಲೋಡಾಗುವುದಾದರೆ ಈ ಮೇಲಿನ ಉಪ ಕಂಡಿಕೆ 3.1.5 ಅನ್ವಯವಾಗುತ್ತದೆ. ಹಾಲಿ ಗ್ರಾಹಕನ ಒಟ್ಟು ನಿರ್ಮಿತ ಕಟ್ಟಡ ಪ್ರದೇಶ 500 ಚದುರ ಮೀಟರುಗಳನ್ನು ಮೀರಿದರೆ ಅದಕ್ಕೆ ಉಪ ಕಂಡಿಕೆ 3.1.5 ಅನ್ವಯವಾಗುತ್ತದೆ. ಇಂತಹ ಪ್ರಕರಣದಲ್ಲಿ ಗ್ರಾಹಕನು ಉಪ ಕಂಡಿಕೆ 3.1.5 ರಲ್ಲಿ ಹೇಳಿರುವಂತೆ ಟ್ರಾನ್ಸ್‌ಫಾರ್ಮರಿಗಾಗಿ ಜಾಗ ಒದಗಿಸತಕ್ಕದ್ದು ಮತ್ತು ತನ್ನ ಸ್ವಂತ ವೆಚ್ಚದಲ್ಲಿ ಟ್ರಾನ್ಸ್‌ಫಾರ್ಮರ್ ಅಳವಡಿಸತಕ್ಕದ್ದು.

ಟಿಪ್ಪಣಿ : 1) ಅರ್ಜಿದಾರನಿಂದ ಜಾಗ ಪೂರೈಕೆಯಾಗದಿದ್ದಲ್ಲಿ ಆತನು ಹೆಚ್ಚುವರಿ ವಿದ್ಯುತ್ ಸರಬರಾಜಿಗೆ ಅರ್ಹನಾಗುವುದಿಲ್ಲ.

2) ಹೆಚ್ಚುವರಿ ಲೋಡನ್ನು ಕೋರಿರುವ ಹಾಲಿ ಸ್ಥಾಪನಗಳ ಪ್ರಕರಣದಲ್ಲಿ, ಹೆಚ್.ಟಿ/ಎಲ್.ಟಿ. ಭೂಗತ ಕೇಬಲ್ಲುಗಳ ಪದ್ಧತಿಗಾಗಿ ಬೆಂಗಳೂರು ನಗರ ಪ್ರದೇಶಕ್ಕಾಗಿ (ಬೆಂ.ಮ.ಪಾ. ಮತ್ತು ಬಿಡಿಎ ಪ್ರದೇಶಗಳಿಗಾಗಿ) ಪ್ರತಿ ಕಿ.ವಾ. ಗೆ ರೂ. 1000.00 ಗಳನ್ನು ಹೆಚ್ಚುವರಿ ಮೊತ್ತ ಸಂಗ್ರಹಿಸತಕ್ಕದ್ದು.

3.2 ಬಡಾವಣೆಗಳಿಗೆ ಕಡಿಮೆ ವಿದ್ಯುತ್ ಪ್ರಮಾಣ ಸರಬರಾಜಿಗೆ ಉಪಬಂಧ.

3.2.1 ಸಕ್ಷಮ ಪ್ರಾಧಿಕಾರದಿಂದ ಅನುಮೋದಿತ ಲೇಔಟ್‌ಗಳ ಪ್ರಕರಣದಲ್ಲಿ ಮುಂದಿನ ಅಂಶಗಳ ಬಗ್ಗೆ ಷರತ್ತುಗಳಿಗೆ ಒಳಪಟ್ಟು ವಿತರಣ ಮುಖ್ಯವನ್ನು ಬಲಗೊಳಿಸುವ ಕಾರ್ಯಗಳು ಅಥವಾ ವಿದ್ಯುತ್ ಉಪ ಕೇಂದ್ರ ಅಭಿವೃದ್ಧಿಗೊಳಿಸುವ / ವಿಸ್ತರಿಸುವ ಕಾರ್ಯಗಳನ್ನು ಹೊರತುಪಡಿಸಿ, 11 ಕೆ.ವಿ. ಮಾರ್ಗದ ವಿಸ್ತರಣೆ, ಟ್ರಾನ್ಸ್‌ಫಾರ್ಮರ್, ಕಡಿಮೆ ವಿದ್ಯುತ್ ಪ್ರಮಾಣದ ಮಾರ್ಗಗಳು ಇತ್ಯಾದಿಗಳೂ ಸೇರಿದಂತೆ ಸೇವಾ ಮಾರ್ಗದ ವಿಸ್ತರಣೆಯ ಕಾಮಗಾರಿಗಳನ್ನು ತನ್ನ ವೆಚ್ಚದಲ್ಲಿ ಅಭಿವೃದ್ಧಿಗಾರರು ನಿರ್ವಹಿಸಬೇಕು:

i) ಕಾಮಗಾರಿಯ ಅಂದಾಜು ವೆಚ್ಚದ ಶೇ. 10 ರ ದರದಲ್ಲಿ ವಿತರಣ ಲೈಸೆನ್ಸುದಾರರಿಗೆ ಉಸ್ತುವಾರಿ ಶುಲ್ಕಗಳನ್ನು ಸಂದಾಯ ಮಾಡಬೇಕು.

ii) ಅನುಮತಿ ಪಡೆದ ಒಂದನೆಯ ದರ್ಜೆಯ ವಿದ್ಯುತ್ ಗುತ್ತಿಗೆದಾರರ ಮೂಲಕ ವಿತರಣ ಲೈಸೆನ್ಸುದಾರರಿಂದ ನಿಗದಿಪಡಿಸಿದ ಅಂದಾಜು, ಗುಣಮಟ್ಟಗಳು ಹಾಗೂ ಸಿದ್ಧಪಡಿಸಿದ ನಕ್ಷೆಗಳಂತೆ ವಿವರಣೆಗಳಂತೆ ದರಗಳ ಅನುಸೂಚಿಯಾಧಾರದ ಮೇಲೆ ಕಾಮಗಾರಿಗಳನ್ನು ನಿರ್ವಹಿಸಬೇಕು.

iii) ಅಭಿವೃದ್ಧಿಗಾರರು, ಬಡಾವಣೆಯ ಶೇ. 25ರಷ್ಟು ಅರ್ಜಿದಾರರು ವಿದ್ಯುತ್ ಸರಬರಾಜು ಪಡೆಯುವವರೆಗೆ, ಲೇಔಟಿನಲ್ಲಿ ಸ್ಥಾಪಿಸಲಾದ ಟ್ರಾನ್ಸ್‌ಫಾರ್ಮರ್ ಕೇಂದ್ರಗಳು ಹಾಗೂ ಮಾರ್ಗಗಳನ್ನು ನಿರ್ವಹಿಸುವ ಒಪ್ಪಿಗೆಯನ್ನು ಸ್ಥಿರೀಕರಿಸಿ ಅಗತ್ಯವಿರುವ ಬೆಲೆಯ ಸ್ಟಾಂಪ್ ಪೇಪರಿನಲ್ಲಿ ಒಪ್ಪಂದ ಮಾಡಿಕೊಳ್ಳಬೇಕು. ಲೇಔಟಿನ ಕನಿಷ್ಠ ಶೇ. 25 ರಷ್ಟು ಅರ್ಜಿದಾರರು ವಿದ್ಯುತ್ ಸರಬರಾಜು ಬಳಸಿಕೊಂಡ ನಂತರ ಹಾಗೂ ಅಭಿವೃದ್ಧಿಗಾರರಿಂದ ತೃಪ್ತಿಕರವಾಗಿ ಕಾರ್ಯಗಳ ಸಮಾಪನಗೊಂಡ ನಂತರ ಯಾವುದೇ ನಿರ್ವಹಣಾ ಉದ್ದೇಶಕ್ಕಾಗಿ ಶುಲ್ಕಗಳನ್ನು ಪಾವತಿಸದೆ, ವಿತರಣ ಲೈಸೆನ್ಸುದಾರರು ಲೇಔಟಿನ ಟ್ರಾನ್ಸ್‌ಫಾರ್ಮರ್(ಗಳು) ಸೇರಿದಂತೆ ಇಡೀ ವಿತರಣ ಪದ್ಧತಿಯನ್ನು ತಮ್ಮ ವಶಕ್ಕೆ ಪಡೆದುಕೊಳ್ಳಬೇಕು.

iv) ವಿತರಣ ಲೈಸೆನ್ಸುದಾರರು, ಬಡಾವಣೆಯ ಟ್ರಾನ್ಸ್‌ಫಾರ್ಮರ್ (ಗಳು) ಹಾಗೂ ವಿತರಣ ಪದ್ಧತಿಯನ್ನು ತಮ್ಮ ವಶಕ್ಕೆ ಪಡೆದ ದಿನಾಂಕದಿಂದ, ಅಭಿವೃದ್ಧಿದಾರರಿಂದ, ಅವರು ನಿರ್ವಹಿಸಿದ ಕಾಮಗಾರಿಯ ಗುಣಮಟ್ಟದ ಜೊತೆಗೆ ಕಾಮಗಾರಿಗೆ ಬಳಸಿದ ವಸ್ತುಗಳಿಗಾಗಿ ಒಂದು ವರ್ಷದ ಗ್ಯಾರಂಟಿಯನ್ನು ಪಡೆಯಬೇಕು.

v) ವಿನಿಯಮಗಳ ಕಂಡಿಕೆ 3.1 ರ ಉಪಬಂಧಗಳಂತೆ ಗೃಹ/ವಾಣಿಜ್ಯ/ಕೈಗಾರಿಕಾ ಪ್ರವರ್ಗಗಳಲ್ಲಿ ಬರುವ ಅರ್ಜಿದಾರರಿಗೆ ಅನ್ವಯಿಸುತ್ತವೆ.

3.2.2 ಕರ್ನಾಟಕ ಸರ್ಕಾರ ಅಥವಾ ಭಾರತ ಸರ್ಕಾರದಿಂದ ಆರ್ಥಿಕ / ಸಾಮಾಜಿಕವಾಗಿ ದುರ್ಬಲವಾಗಿರುವ ವರ್ಗದವರಿಗೆ ನಿವೇಶನ / ಮನೆಗಳನ್ನು ಯಾವುದೇ ಯೋಜನೆಯಡಿಯಲ್ಲಿ ಮಂಜೂರಾಗಿದ್ದ ಪ್ರಕರಣದಲ್ಲಿ, ವಿತರಣ ಲೈಸೆನ್ಸುದಾರನು ಅರ್ಜಿದಾರ ಅಥವಾ ಕರ್ನಾಟಕ ಸರ್ಕಾರ ಅಥವಾ ಭಾರತ ಸರ್ಕಾರ ಅಥವಾ ಯೋಜನೆಯ ಉಸ್ತುವಾರಿ ವ್ಯಕ್ತಿಯಿಂದ ಪ್ರತಿ ನಿವೇಶಕ್ಕೆ 2000-00 ವಸೂಲು ಮಾಡಿ, ವಿದ್ಯುತ್ ಸರಬರಾಜಿನ ವ್ಯವಸ್ಥೆ ಮಾಡತಕ್ಕದ್ದು, ಅಂಥಹ ಲೇಔಟುಗಳಿಗೆ ವಿದ್ಯುದೀಕರಣದ ವೆಚ್ಚಕ್ಕೆ ಪರ್ಯಾಯವಾಗಿ ಯೋಜನೆಯಲ್ಲಿಯೇ ಬಜೆಟ್ಟಿನಲ್ಲಿ ತೆಗೆದಿರಿಸಿ ಲೈಸೆನ್ಸುದಾರರಿಗೆ ಸಂದಾಯಮಾಡಬೇಕು.

3.2.3 ಮೇಲಿನ ಉಪ ಕಂಡಿಕೆ (I) ರ ವ್ಯಾಪ್ತಿಯನ್ನು ಹೊರತು ಪಡಿಸಿದ ಲೇಔಟ್‌ಗಳ ಪ್ರಕರಣದಲ್ಲಿ ಮತ್ತು ಲೇಔಟಿನಲ್ಲಿ ವಿದ್ಯುತ್ ಮಾರ್ಗ / ಘಟಕವನ್ನು ಅಭಿವೃದ್ಧಿಗಾರರು ಸ್ಥಾಪಿಸಿರದಿದ್ದಲ್ಲಿ, ವಿತರಣ ಲೈಸೆನ್ಸುದಾರನು ಈ ಮುಂದೆ ಹೇಳುವಂತೆ ವಿದ್ಯುತ್ ಮಾರ್ಗ/ಘಟಕ ವೆಚ್ಚವನ್ನು ವಸೂಲು ಮಾಡಿಕೊಳ್ಳತಕ್ಕದ್ದು :

i) ಬೆಂಗಳೂರು ನಗರ ಪಾಲಿಕೆ, ಬಿಡಿಎ ಮತ್ತು ಅವುಗಳ ವ್ಯಾಪ್ತಿಗೆ ಬರುವ ಸೇರ್ಪಡೆ ಪ್ರದೇಶ ಹಾಗೂ ಮೈಸೂರು, ಮಂಗಳೂರು, ಹುಬ್ಬಳ್ಳಿ, ಗುಲ್ಬರ್ಗಾ ಮತ್ತು ಬೆಳಗಾವಿಗಳ ನಗರ ಪಾಲಿಕೆಗಳು ಮತ್ತು ಅವುಗಳ ವ್ಯಾಪ್ತಿಗೆ ಬರುವ ಸೇರ್ಪಡೆ ಪ್ರದೇಶಗಳಲ್ಲಿ ಬರುವ ನಿವೇಶನಗಳಿಗಾಗಿ :

ಎ) 1200 ಚದುರ ಅಡಿ ಮತ್ತು ಅದಕ್ಕಿಂತ ಕಡಿಮೆ ಅಳತೆಯ ನಿವೇಶಗಳಿಗೆ, ಪ್ರತಿ ನಿವೇಶನಕ್ಕೆ ಕನಿಷ್ಠ 4000.00 ರೂ ಗೆ ಒಳಪಟ್ಟು ಪ್ರತಿ ಕಿ.ವಾ. ಗೆ ಕೋರಿದ ಲೋಡಿಗೆ 4000.00 ರೂ.

ಬಿ) 1200 ಚದುರ ಅಡಿಗಿಂತ ಹೆಚ್ಚಿನ ಅಳತೆಯ ಪ್ರತಿ ನಿವೇಶನಕ್ಕೆ ಕನಿಷ್ಟ 12000-00 ಒಳಪಟ್ಟು, ಪ್ರತಿ ಕಿ.ವಾ. ಕೋರಿದ ಲೋಡಿಗೆ 4000.00 ರೂ.

ii) ಸ್ಥಳೀಯ / ಅಭಿವೃದ್ಧಿ ಪ್ರಾಧಿಕಾರವು ಗುರುತಿಸಿದ, ಪಟ್ಟಣ ಪ್ರದೇಶದೊಳಗೆ ಇತರ ನಗರ ಪ್ರದೇಶಗಳಲ್ಲಿ ಬರುವ ನಿವೇಶನಗಳಿಗೆ, ಪ್ರತಿ ನಿವೇಶನಕ್ಕೆ ಕನಿಷ್ಠ 4000.00 ರೂ. ಗೊಳಪಟ್ಟು ಪ್ರತಿ ಕಿ.ವಾ. ಕೋರಿದ ಲೋಡಿಗೆ 4000.00 ರೂ.

iii) ಉಪ ಕಂಡಿಕೆ 3.2.3 (i) ಮತ್ತು (ii) ಅನ್ವಯಿಸುವ ಪಟ್ಟಣ ಮಿತಿಯ ಹೊರಗಿನ ಲೇಔಟುಗಳಿಗೆ ಹೊರತಾದ ಪ್ರದೇಶದಲ್ಲಿ ಬರುವ ನಿವೇಶಗಳಿಗಾಗಿ, ಪ್ರತಿ ನಿವೇಶಕ್ಕೆ ಕನಿಷ್ಠ 3000.00 ರೂ. ಗೊಳಪಟ್ಟು ಪ್ರತಿ ಕಿ.ವಾ. ಕೋರಿದ ಲೋಡಿಗೆ 3000.00 ರೂ.

3.2.4 ಲೇಔಟ್‌ಗಳು/ಕಟ್ಟಡಗಳಿಗೆ ವಿದ್ಯುತ್ ಸರಬರಾಜು ಬೇಕಾಗಿದ್ದರೆ ಮತ್ತು ಕೋರಿಕೆಯ ಲೋಡು 7500 ಕೆವಿಎ ಗಿಂತ ಹೆಚ್ಚಾಗುವಂತಿದ್ದರೆ ಅಭಿವೃದ್ಧಿಗಾರರು/ಅರ್ಜಿದಾರರು ವಿದ್ಯುತ್ ಉಪಕೇಂದ್ರದ ಸ್ಥಾಪನೆಗೆ ಜಾಗ, ಆ ಉಪಕೇಂದ್ರದ ಹಾಗೂ ಸಂಬಂಧಿಸಿದ ಮಾರ್ಗಗಳು/ ಉಪಕರಣಗಳ ಸ್ಥಾಪನಗೆ ತಗಲುವ ಪೂರ್ಣ ವೆಚ್ಚ ಭರಿಸಬೇಕು. ಈ ಕಾಮಗಾರಿಯನ್ನು ಅಂದಾಜಿನ ಅನುಸಾರ ಮೊತ್ತವನ್ನು ಪಡೆದು ಲೈಸೆನ್ಸುದಾರರು ನಿರ್ವಹಿಸಬೇಕು ಅಥವಾ ಅರ್ಜಿದಾರರು ಉಸ್ತುವಾರಿ ಶುಲ್ಕಗಳೆಂದು ಅಂದಾಜಿನ ಶೇಕಡಾ 10 ರಷ್ಟು ಮೊತ್ತವನ್ನು ಲೈಸೆನ್ಸುದಾರರಿಗೆ ಸಂದಾಯಮಾಡಿ ಸೂಕ್ತವಾದ ವರ್ಗದ ಪರವಾನಗಿ ಪಡೆದ ಗುತ್ತಿಗೆದಾರನಿಂದ ಮಾಡಿಸಬೇಕಾಗಿದೆ.

3.3 ನೀರಾವರಿ ಪಂಪುಸೆಟ್ಟುಗಳಿಗೆ ಅವಕಾಶ :

ಕಾಲ ಕಾಲಕ್ಕೆ ಇರುವ ಕರ್ನಾಟಕ ಸರ್ಕಾರದ ನೀತಿಯನುಸಾರ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜಿನ ವ್ಯವಸ್ಥೆ ಮಾಡಬೇಕು.

3.4 ಎಲ್‌.ಟಿ. ನೀರು ಸರಬರಾಜಿಗೆ ಅವಕಾಶ :

ಎಲ್‌.ಟಿ. ನೀರು ಸರಬರಾಜಿನ ಸ್ಥಾಪನೆಗಳಿಗೆ ವಿದ್ಯುದೀಕರಣದ ವೆಚ್ಚವನ್ನು ನೀರು ಸರಬರಾಜು ಯೋಜನೆಯಲ್ಲಿಯೇ ಸೇರಿಸಬೇಕು. ಲೈಸೆನ್ಸುದಾರರು ಅಂದಾಜನ್ನು ಸಿದ್ಧಪಡಿಸಿ ಹಾಗೂ ಅಂದಾಜಿನ ಮೊತ್ತವನ್ನು ಅರ್ಜಿದಾರರಿಂದ ಸಂಗ್ರಹಿಸಬೇಕು. ಅರ್ಜಿದಾರನು ಅಂತಹ ಸರಬರಾಜಿನ ಕೆಲಸವನ್ನು ತಾನೇ ನಿರ್ವಹಿಸಿಕೊಳ್ಳ ಬಯಸಿದರೆ ಉಸ್ತುವಾರಿ ಶುಲ್ಕಗಳನ್ನು ವಿದ್ಯುದೀಕರಣದ ದರವಾಗಿ ಶೇಕಡಾ 10 ರಷ್ಟು ಮೊತ್ತವನ್ನು ಸಂಗ್ರಹಿಸಿ ಅರ್ಜಿದಾರನಿಗೆ ಕೆಲಸ ಮಾಡಲು ಅವಕಾಶನೀಡಬೇಕು.

3.5 **ಬೀದಿ ದೀಪಗಳಿಗೆ ಅವಕಾಶಗಳು :**

ಅಭಿವೃದ್ಧಿ ಪ್ರಾಧಿಕಾರಗಳು / ವಿಶ್ವಸ್ಥ ಮಂಡಳಿಗಳು / ಮುನಿಸಿಪಲ್ ಕಾರ್ಪೊರೇಶನ್ನುಗಳು ಸಿಟಿ ಮುನಿಸಿಪಾಲಿಟಿಗಳು/ಕೈಗಾರಿಕಾಭಿವೃದ್ಧಿ ಪ್ರದೇಶಾಭಿವೃದ್ಧಿ ಮಂಡಳಿಗಳು/ಎಪಿಎಂಸಿ/ಗೃಹ ಮಂಡಳಿಗಳು/ಗ್ರಾಮ ಮತ್ತು ಟೌನ್ ಪಂಚಾಯಿತಿಗಳು ಮತ್ತು ಇತರ ಪ್ರಾಧಿಕಾರಗಳು/ ಮಂಡಳಿಗಳ ಸಾರ್ವಜನಿಕ ಸ್ಥಳ ಮತ್ತು ಅಧಿಸೂಚಿತ ಪ್ರದೇಶಗಳಲ್ಲಿ ಬೀದಿ ದೀಪಗಳಿಗೆ ವಿದ್ಯುತ್ ಸರಬರಾಜು ಮಾಡುವುದಕ್ಕೆ (ಹೊಸ ಅಥವಾ ಹೆಚ್ಚುವರಿ ಬೀದಿ ದೀಪಗಳಿಗೆ) ದರ ಅನುಸೂಚಿಯಂತೆ ಲೈಸೆನ್ಸುದಾರನು ಸಿದ್ಧಪಡಿಸಿದ ಅಂದಾಜಿನಂತೆ ಹಣವನ್ನು ಸಂಗ್ರಹಿಸಿದ ನಂತರ ಪೂರೈಸಬೇಕು. ಅರ್ಜಿದಾರನು ಅಂತಹ ಸರಬರಾಜಿನ ಕೆಲಸವನ್ನು ತಾನೇ ನಿರ್ವಹಿಸಿಕೊಳ್ಳ ಬಯಸಿದರೆ ಉಸ್ತುವಾರಿ ಶುಲ್ಕಗಳನ್ನು ವಿದ್ಯುದೀಕರಣದ ಅಂದಾಜು ದರದ ಶೇಕಡಾ 10 ರಷ್ಟು ಮೊತ್ತವನ್ನು ಸಂಗ್ರಹಿಸಿ ಅರ್ಜಿದಾರನಿಗೆ ಕೆಲಸ ಮಾಡಲು ಅವಕಾಶನೀಡಬೇಕು.

3.6. **ಎಚ್.ಟಿ / ಇ.ಎಚ್.ಟಿ ಸರಬರಾಜಿಗೆ ಅವಕಾಶ :**

3.6.1 ಅರ್ಜಿದಾರನಿಗೆ ಸರಬರಾಜನ್ನು ವಿಸ್ತರಿಸುವ ಕ್ರಮವಾಗಿ ಹಾಲಿಯಿರುವ ಎಚ್.ಟಿ/ಇ.ಎಚ್.ಟಿ ಮಾರ್ಗದ ವಿಸ್ತರಣೆ ಅಥವಾ ಉಪಕೇಂದ್ರದಿಂದ ಹೆಚ್.ಟಿ/ಇ.ಹೆಚ್.ಟಿ ಮಾರ್ಗವನ್ನು ಹೊಸದಾಗಿ ನಿರ್ಮಿಸುವ ಅಗತ್ಯವಿರುವ ಅರ್ಜಿಗಳ ಪ್ರಕರಣಗಳಲ್ಲಿ, ಎಚ್.ಟಿ. ಮಾರ್ಗಕ್ಕೆ ವಿತರಣಾ ಲೈಸೆನ್ಸುದಾರ ಮತ್ತು ಇ.ಎಚ್.ಟಿ. ಪ್ರಕರಣಗಳಲ್ಲಿ ವಿತರಣಾ ಲೈಸೆನ್ಸುದಾರ ಮತ್ತು ಪ್ರಸರಣಾ ಲೈಸೆನ್ಸುದಾರರ ಸಮನ್ವಯದಿಂದ, ಅರ್ಜಿದಾರರ ಗುತ್ತಿಗೆ ಬೇಡಿಕೆಯಂತೆ ವಾಸ್ತವವಾಗಿ ಬೇಕಿರುವ ವಿದ್ಯುತ್ ಸರಬರಾಜಿನ ವ್ಯವಸ್ಥೆಗಾಗಿ ಅಂದಾಜನ್ನು ಸಿದ್ಧಪಡಿಸಿ ಅಂದಾಜು ಪಟ್ಟಿಯನ್ನು ಅರ್ಜಿದಾರನಿಗೆ ಒದಗಿಸಬೇಕು. ಆದರೂ ಅಂದಾಜಿನಲ್ಲಿ ಅಭಿವೃದ್ಧಿಪಡಿಸುವ/ಕೇಂದ್ರದಲ್ಲಿ ಕಾಮಗಾರಿಗಳನ್ನು ವಿಸ್ತರಿಸುವ ಅಥವಾ ಮಾರ್ಗಗಳನ್ನು ಬಲಗೊಳಿಸುವ ಕಾಮಗಾರಿಗಳು ಸೇರತಕ್ಕದ್ದಲ್ಲ. ಆದಾಗ್ಯೂ, ಅರ್ಜಿದಾರ/ರಿಗೆ ವಿಶೇಷವಾಗಿ ಎಳೆದ ಹೆಚ್.ಟಿ/ಇ.ಎಚ್.ಟಿ ಮಾರ್ಗ, ಟ್ರಾನ್ಸ್‌ಫಾರ್ಮರ್‌ಗಳು, ಅದರಲ್ಲಿ ಸೇರುತ್ತವೆ.

3.6.2 ಲೈಸೆನ್ಸುದಾರರು, ಜಾರಿಯಲ್ಲಿರುವ ದರ ಅನುಸೂಚಿಗಳ ಆಧಾರದ ಮೇಲೆ ಅಂದಾಜು ಪಟ್ಟಿಯನ್ನು ಮಾಡಬೇಕು.

3.6.3 ಕಾಮಗಾರಿಯ ಅಂದಾಜು ಮೊತ್ತವನ್ನು ಸಂಗ್ರಹಿಸಿ ವಿತರಣಾ ಲೈಸೆನ್ಸುದಾರನು ಕೆಲಸವನ್ನು ಮಾಡತಕ್ಕದ್ದು ಅಥವಾ ಅರ್ಜಿದಾರನಿಂದ ಕೆಲಸ ಮಾಡಬೇಕು. ಅರ್ಜಿದಾರನು ಲೈಸೆನ್ಸುದಾರರು ಮಾಡುವ ಅಂದಾಜು, ಪ್ರಮಾಣಿತ ನಕ್ಷೆಗಳು ಮತ್ತು ವಿವರಣೆಗಳಂತೆ ಸ್ವಯಂವಾಗಿ ಕಾಮಗಾರಿಯನ್ನು ಮಾಡಿಕೊಳ್ಳಬಯಸಿದರೆ ಅದಕ್ಕೆ ಮಂಜೂರು ಮಾಡತಕ್ಕದ್ದು. ಅಂತಹ ಪ್ರಕರಣದಲ್ಲಿ ವಿತರಣಾ ಲೈಸೆನ್ಸುದಾರನಿಗೆ ಅಂದಾಜು ವೆಚ್ಚದ ಶೇ. 10 ರಷ್ಟನ್ನು ಉಸ್ತುವಾರಿ ಶುಲ್ಕವಾಗಿ ಪಾವತಿಸಿ ಮಾನ್ಯತೆ ಪಡೆದ ಒಂದನೆಯ ದರ್ಜೆಯ ವಿದ್ಯುತ್ ಗುತ್ತಿಗೆದಾರನ ಮುಖಾಂತರ ಅರ್ಜಿದಾರನು ಕೆಲಸವನ್ನು ಮಾಡಿಸಿಕೊಳ್ಳತಕ್ಕದ್ದು.

3.6.4 ಕೇಂದ್ರದ ವಿಸ್ತರಿಸುವ / ಅಭಿವೃದ್ಧಿ ಪಡಿಸುವ ಅಥವಾ ಮಾರ್ಗಗಳನ್ನು ಬಲಗೊಳಿಸುವ ಕಾಮಗಾರಿಗಳನ್ನು ಲೈಸೆನ್ಸುದಾರರು ಬಂಡವಾಳ ವಿನಿಯೋಗದ ಕಾರ್ಯಕ್ರಮದಲ್ಲಿ ನಿರ್ವಹಿಸಬೇಕು.

3.6.5 ಅರ್ಜಿದಾರನು, ಸ್ವಂತ ಕಾರ್ಯನಿರ್ವಹಣೆಯಡಿಯಲ್ಲಿ ಸ್ಥಾಪಿಸಿದ ವಿದ್ಯುತ್ ಮಾರ್ಗ / ಘಟಕವನ್ನು ಲೈಸೆನ್ಸುದಾರನಿಗೆ ಹಸ್ತಾಂತರಿಸಿದ ದಿನಾಂಕದಿಂದ ಒಂದು ವರ್ಷಕಾಲ ತೃಪ್ತಿಕರ ಕಾರ್ಯನಿರ್ವಹಣೆಯ ಗ್ಯಾರಂಟಿ ನೀಡತಕ್ಕದ್ದು, ತದನಂತರದಲ್ಲಿ, ಅರ್ಜಿದಾರನು ಉಚಿತವಾಗಿ ನಿರ್ವಹಣೆಯ ಉದ್ದೇಶಕ್ಕಾಗಿ ವಿದ್ಯುತ್ ಮಾರ್ಗ / ಘಟಕವನ್ನು ವಿತರಣಾ ಲೈಸೆನ್ಸುದಾರನ ವಶಕ್ಕೆ ಒಪ್ಪಿಸಬೇಕು.

3.6.6 ಅರ್ಜಿದಾರನಿಗೆ ವಿದ್ಯುತ್ ಸರಬರಾಜು ಮಾಡುವ ಸಲುವಾಗಿ ಹೊಸ ಉಪಕೇಂದ್ರದ ಸ್ಥಾಪನೆ / ಅಭಿವೃದ್ಧಿ ಪಡಿಸುವ ಅಗತ್ಯವಿರುವ ಅರ್ಜಿಗಳ ಪ್ರಕರಣದಲ್ಲಿ, ಎಚ್.ಟಿ.ಯ ಪ್ರಕರಣದಲ್ಲಿ ವಿತರಣಾ ಲೈಸೆನ್ಸುದಾರನು ಹಾಗೂ ಇ.ಎಚ್.ಟಿ. ಪ್ರಕರಣದಲ್ಲಿ ಪ್ರಸರಣಾ ಲೈಸೆನ್ಸುದಾರನೊಂದಿಗಿನ ಸಮನ್ವಯದಿಂದ ಲೈಸೆನ್ಸುದಾರನು ಬಂಡವಾಳ ವೆಚ್ಚದಲ್ಲಿ ಕೆಲಸ ಮಾಡಬೇಕು.

3.6.7 (ಎ) ಗ್ರಾಹಕನು ಕಡಿಮೆ ಲೋಡಿಗೂ ಕೂಡ ಮಾದರಿ ನಿಬಂಧನೆಗಳಂತೆ ನಿರ್ದಿಷ್ಟವಾದ ವೋಲ್ಟೇಜಿನ ಹಂತಗಳಲ್ಲಿ ವಿದ್ಯುತ್ ಸರಬರಾಜು ಪಡೆಯಬಹುದಾಗಿದೆ.

(ಬಿ) ಪ್ರದೇಶದಲ್ಲಿ ಇರುವ ಪದ್ಧತಿಯ ಜಾಲದ ಆಧಾರದ ಮೇಲೆ 2000 ಕೆವಿಎ ಗಿಂತ ಹೆಚ್ಚಾಗಿ ಸಿ.ಡಿ. ಇದ್ದಲ್ಲಿ ಸರಬರಾಜಿನ ವ್ಯವಸ್ಥೆ ಮಾಡಲಾಗುವುದು.

(ಸಿ) ಲೈಸನ್ಸುದಾರನು ತನ್ನ ವಿವೇಚನೆಯಲ್ಲಿ ಈ ಮುಂದೆ ಉಲ್ಲೇಖಿಸಿರುವ ವಿಸ್ತರಣಾ ಶುಲ್ಕಗಳನ್ನು ಸಂಗ್ರಹಿಸಿ ನಿಗದಿತ ಮಿತಿಯೊಳಗೆ ವೋಲ್ಟೇಜ್ ನಿಯಂತ್ರಣಕ್ಕಾಗಿ ಸೂಕ್ತ ಸಾಮರ್ಥ್ಯದ ಮಾರ್ಗಗಳು/ಘಟಕಗಳನ್ನು ಒದಗಿಸಿ ಮಾದರಿ ನಿಬಂಧನೆಗಳಂತೆ ನಿಗದಿತವಾಗಿರುವ ನಿರ್ದಿಷ್ಟ ವರ್ಗದ ಸರಬರಾಜಿಗಿಂತ ಹೆಚ್ಚಿನ ಪರಿಮಾಣದ ವಿದ್ಯುತ್ ಸರಬರಾಜು ಮಾಡಬಹುದಾಗಿದೆ.

| ಬೇಡಿಕೆ ಒಪ್ಪಂದ | ಸರಬರಾಜಿನ ವೋಲ್ಟೇಜು | ಷರಾ |
|---|---|---|
| 2000 ಕೆವಿಎ ಗಿಂತ ಹೆಚ್ಚು 7500 ಕೆವಿಎ ವರೆಗೆ | 4.6/11/13.2 ಕೆವಿ | 2000 ಕೆವಿಎ ಗಿಂತ ಹೆಚ್ಚಿರುವ ಸಿ.ಡಿ,ಗಾಗಿ ಪ್ರತಿ ಎಂ.ವಿ.ಎಗೆ 5 ಲಕ್ಷ ರೂ. ದರದಲ್ಲಿ ಉದ್ದೀಪನಾ ಶುಲ್ಕ ಸಂಗ್ರಹಿಸತಕ್ಕದ್ದು. |
| 7500 ಕೆವಿಎ ಗಿಂತ ಹೆಚ್ಚು 10000 ಕೆವಿಎ ವರೆಗೆ | 33 ಕೆವಿ. | 7500 ಕೆವಿಎ ಗಿಂತ ಹೆಚ್ಚಿರುವ ಸಿ.ಡಿ.ಗಾಗಿ ಪ್ರತಿ ಎಂ.ವಿ.ಎ ಗೆ 5 ಲಕ್ಷ ರೂ. ದರದಲ್ಲಿ ಉದ್ದೀಪನಾ ಶುಲ್ಕ ಸಂಗ್ರಹಿಸತಕ್ಕದ್ದು. |

## ಅಧ್ಯಾಯ – IV

4.0 ಸಂಕೀರ್ಣಗಳು

4.1 ಅಡಚಣೆಗಳನ್ನು ನಿವಾರಿಸುವ ಅಧಿಕಾರ

1. ಆಯೋಗವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಈ ವಿನಿಯಮಗಳ ಯಾವುದೇ ಉಪಬಂಧಗಳ ಜಾರಿಯಿಂದ ಯಾವುದೇ ಅಡಚಣೆ ಉಂಟಾದಲ್ಲಿ, ಅದನ್ನು ನಿವಾರಿಸಬಹುದಾಗಿದೆ.
2. ಈ ವಿನಿಯಮಗಳ ಜಾರಿಯಿಂದ ಎದುರಾಗಬಹುದಾದ ಯಾವುದೇ ಅಡಚಣೆಗಳನ್ನು ನಿವಾರಿಸಲು ಸೂಕ್ತ ಆದೇಶ ಕೋರಿ ಲೈಸೆನ್ಸುದಾರ/ಗ್ರಾಹಕ/ಅರ್ಜಿದಾರರು ಆಯೋಗಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ.

4.1.2 ಆಚರಣಾ ನಿರ್ದೇಶನಗಳು ಮತ್ತು ಆದೇಶಗಳ ನೀಡಿಕೆ.

ಈ ವಿನಿಯಮಗಳು ಮತ್ತು ವಿದ್ಯುಚ್ಛಕ್ತಿ ಅಧಿನಿಯಮ 2003 ರ ಉಪಬಂಧಗಳಿಗೊಳಪಟ್ಟು, ಆಯೋಗವು, ವಿನಿಯಮಗಳ ಮತ್ತು ವ್ಯವಹರಣೆಗಳ ಜಾರಿಯಲ್ಲಿ ಅನುಸರಿಸಬೇಕಾದ ಸಂಬಂಧದಲ್ಲಿ ಕಾಲಕಾಲಕ್ಕೆ ಆದೇಶಗಳು ಮತ್ತು ಆಚರಣಾ ನಿರ್ದೇಶನಗಳನ್ನು ಹೊರಡಿಸಬಹುದಾಗಿದೆ.

4.1.3 ತಿದ್ದುಪಡಿಯ ಅಧಿಕಾರ :

ಆಯೋಗವು, ಕಾಲ ಕಾಲಕ್ಕೆ, ಈ ವಿನಿಯಮಗಳ ಯಾವುದೇ ಉಪಬಂಧಗಳಿಗೆ, ಸೇರಿಸುವ, ಬದಲು ಮಾಡುವ, ಪಲ್ಲಟಿಸುವ, ಮಾರ್ಪಡು ಅಥವಾ ತಿದ್ದುಪಡಿ ಮಾಡಬಹುದಾಗಿದೆ.

ಆದೇಶದ ಮೇರೆಗೆ,

ಕಾರ್ಯದರ್ಶಿ,

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ